**<u>ನಾಲ್ಕನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ</u>**
**<u>ನ್ಯಾಯಾಧೀಶರು, ವಿಜಯಪುರ, ಇವರ ನ್ಯಾಯಾಲಯ</u>**

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 04**
**ಪಿಡಬ್ಲೂಃ 06**

ಸಾಕ್ಷಿದಾರರ ಹೆಸರು : ಭೀಮಶಿ ಪವಾರ

ತಂದೆಯ ಹೆಸರು : ಲಾಲು

ವಯಸ್ಸು : **48** ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಸಿದ್ದನಾಥ

- - - - -

**<u>ಇಂದು ದಿನಾಂಕ 19.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ</u>**

1) ನನಗೆ ಆರೋಪಿ ನಂ.**1** ಮತ್ತು **2** ರವರು ಗೊತ್ತಿರುವುದಿಲ್ಲ. ಪೋಲೀಸರು ನನ್ನನ್ನು ಯಾವುದೇ ಪಂಚನಾಮೆ ಮಾಡಲು ಕರೆಸಿರುವುದಿಲ್ಲ. ಈಗ ಒಂದು ವರ್ಷದ ಹಿಂದೆ ಒಂದು ದಿನ ನಾನು ವೈಯಕ್ತಿಕ ಕೆಲಸದ ಮೇರೆಗೆ ಕೊಲ್ಹಾರ ಪೋಲೀಸ ಠಾಣೆಗೆ ಹೋದಾಗ ಪೋಲೀಸರು ಎರಡು ಖಾಲಿ ಹಾಳೆಗಳ ಮೇಲೆ ನನ್ನ ಸಹಿ ಪಡೆದಿದ್ದಾರೆ. ಅದೇ ಸಮಯದಲ್ಲಿ ನನ್ನನ್ನು ನಿಲ್ಲಿಸಿ ಕೆಲವು ಪೋಟೋಗಳನ್ನು ತೆಗೆದಿದ್ದಾರೆ.

**2)** ಈಗ ನನ್ನ ಸಹಿ ಇರುವ ಆರೋಪಿತರು ಹಾಜರುಪಡಿಸುವ ವಸ್ತು ಮತ್ತು ಮೋಟರ ಸೈಕಲ್ ಜಪ್ತಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿ.ಪಿ.**7** ಎಂದು ಗುರುತಿಸಲಾಗಿದ್ದು, ಸಾಕ್ಷಿಯ

ಸಹಿಯನ್ನು ನಿ.ಪಿ.7(ಬಿ) ಎಂದು ಗುರುತಿಸಲಾಯಿತು. ಈಗ ನನ್ನ ಭಾವಚಿತ್ರವಿರುವ ಎರಡು ಪೋಟೋಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿ.ಪಿ.8 ಮತ್ತು 9 ಎಂದು ಗುರುತಿಸಲಾಗಿದೆ. ನನಗೆ ನಿ.ಪಿ.7 ರಲ್ಲಿ ಬರೆದ ವಿಷಯ ಗೊತ್ತಿಲ್ಲ. ನಿ.ಪಿ.8 ಮತ್ತು 9 ಪೋಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ಹೇಳಲಿಕ್ಕೆ ಆಗುವುದಿಲ್ಲ.

**3)** ಈಗ ನನ್ನ ಸಹಿ ಇರುವ ಆರೋಪಿತರು ತೋರಿಸುವ ಗುನ್ಹೆ ಜಾಗೆ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿ.ಪಿ.10 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.10(ಬಿ) ಎಂದು ಗುರುತಿಸಲಾಯಿತು. ಈಗ ನನ್ನ ಭಾವಚಿತ್ರವಿರುವ ಎರಡು ಪೋಟೋಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿ.ಪಿ.11 ಮತ್ತು 12 ಎಂದು ಗುರುತಿಸಲಾಗಿದೆ. ನನಗೆ ನಿ.ಪಿ.10 ರಲ್ಲಿ ಬರೆದ ವಿಷಯ ಗೊತ್ತಿಲ್ಲ. ನಿ.ಪಿ.11 ಮತ್ತು 12 ಪೋಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ಹೇಳಲಿಕ್ಕೆ ಆಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪಂಚನಾಮೆಗಳಿಗೆ ವಿರುದ್ದವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಪಿಪಿಯವರು ಅನುಮತಿ ಕೋರಿರುತ್ತಾರೆ. ವಾದ ಕೇಳಿ, ಹೇಳಿಕೆ ಪರಿಶೀಲಿಸಿ ಅನುಮತಿ ನೀಡಲಾಯಿತು).

**ಎಸ್.ಸಿ.ನಂಃ 128/2025**
**ಸಿಡಬ್ಲ್ಯೂಃ 04**
**ಪಿಡಬ್ಲ್ಯೂಃ 06**

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ**

**4)** ದಿನಾಂಕ **17.01.2024** ರಂದು ಪೋಲೀಸರು ನನ್ನನ್ನು ಮತ್ತು ಚಾ.ಸಾ.**5** ರವರನ್ನು ಕೊಲ್ಹಾರ ಪೋಲಿಸ ಠಾಣೆಗೆ ಕರೆಯಿಸಿ, ಅಲ್ಲಿ ಅವರ ವಶದಲ್ಲಿದ್ದ ಈಗ ನ್ಯಾಯಾಲಯದ ಮುಂದಿರುವ ಆರೋಪಿ ನಂ.**1** ಮತ್ತು **2** ರವರು ಒಂದು ಪಲ್ಸರ ಮೋಟರ ಸೈಕಲ್ ನಂ.ಕೆ.ಎ.**31**/ಕೆ-**9812**, ಎರಡು ಖರಗಸ, ಒಂದು ಕೊಡಲಿ, ಒಂದು ಖಾಲಿ ಗೊಬ್ಬರದ ಚೀಲವನ್ನು ಹಾಜರುಪಡಿಸಿದ್ದು, ಆ ಕಾಲಕ್ಕೆ **2** ನೇ ಆರೋಪಿಯು ಒಂದು ಸ್ಯಾಮಸಂಗ ಕಂಪನಿಯ ಮೊಬೈಲ್ ಹಾಜರುಪಡಿಸಿದ್ದು, ಅವುಗಳನ್ನು ಪೋಲೀಸರು ನಮ್ಮ ಸಮಕ್ಷಮ ಬೆಳಿಗ್ಗೆ **10.30** ರಿಂದ **11.30** ಘಂಟೆಯವರೆಗೆ ನಿ.ಪಿ.**7** ರಂತೆ ಪಂಚನಾಮೆ ಮಾಡಿ ನಮ್ಮ ಸಹಿ ಪಡೆದಿದ್ದಾರೆ ಮತ್ತು ಆ ಕಾಲಕ್ಕೆ ನಿ.ಪಿ.**8** ಮತ್ತು **9** ರಂತೆ ಪೋಟೋ ತೆಗೆದಿದ್ದಾರೆ ಎಂದರೆ ಸರಿಯಲ್ಲ.

**5)** ನಂತರ ಆರೋಪಿತರು ನಮಗೆ ಗಿಡಕಡಿದ ಜಾಗೆಯನ್ನು ತೋರಿಸುತ್ತೇವೆ ಎಂದು ಹೇಳಿ, ನಮ್ಮನ್ನು ಕೊಲ್ಹಾರ-ಆಸಂಗಿ ರಸ್ತೆಗೆ ಕರೆದುಕೊಂಡು ಹೋಗಿ, ರಾಣಿ ಚನ್ನಮ್ಮ ವಸತಿ ಶಾಲೆಯ ಹತ್ತಿರ ರಸ್ತೆಯ ದಕ್ಷಿಣ ಬದಿಗೆ ಇರುವ ಒಂದು ಜಮೀನಿಗೆ ಕರೆದುಕೊಂಡು ಹೋಗಿ, ಶ್ರೀಗಂಧದ ಗಿಡಗಳನ್ನು ಕಡಿದ ಜಾಗೆ ಎಂದು ತೋರಿಸಿದ್ದು, ಅದರ ಬಗ್ಗೆ ಪೋಲೀಸರು ನಮ್ಮ ಸಮಕ್ಷಮ ಬೆಳಿಗ್ಗೆ **11.45** ರಿಂದ **01.15** ಘಂಟೆವರೆಗೆ

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 04**
**ಪಿಡಬ್ಲೂಃ 06**

ನಿ.ಪಿ.**10** ರಂತೆ ಪಂಚನಾಮೆ ಮಾಡಿ ನಮ್ಮ ಸಹಿ ಪಡೆದಿದ್ದಾರೆ ಮತ್ತು ಆ ಕಾಲಕ್ಕೆ ನಿ.ಪಿ.**11** ಮತ್ತು **12** ರಂತೆ ಫೋಟೋ ತೆಗೆದಿದ್ದಾರೆ ಎಂದರೆ ಸರಿಯಲ್ಲ.

**6)** ಪೋಲೀಸರು ನಮ್ಮ ಸಮಕ್ಷಮ ನಿ.ಪಿ.**7** ಮತ್ತು **10** ರಂತೆ ಪಂಚನಾಮೆಗಳನ್ನು ಮಾಡಿ, ನಿ.ಪಿ.**8, 9, 11** ಮತ್ತು **12** ರಂತೆ ಫೋಟೋಗಳನ್ನು ತೆಗೆದಿದ್ದರೂ ಕೂಡ, ಈಗ ಆರೋಪಿತರಿಗೆ ಸಹಾಯ ಮಾಡಲು ಇಲ್ಲವೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿಃ</u>**

ಏನೂ ಇರುವುದಿಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

4 ನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ವಿಜಯಪುರ.

**<u>ನಾಲ್ಕನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ, ಇವರ ನ್ಯಾಯಾಲಯ</u>**

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 08**
**ಪಿಡಬ್ಲೂಃ 07**

ಸಾಕ್ಷಿದಾರರ ಹೆಸರು : ವಸಂತ ಮುಳಿಕ

ತಂದೆಯ ಹೆಸರು : ಮಾರುತಿ

ವಯಸ್ಸು : **30** ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಕಾಖಂಡಕಿ

- - - - -

**<u>ಇಂದು ದಿನಾಂಕ 19.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ</u>**

1) ನನಗೆ ನ್ಯಾಯಾಲಯದ ಮುಂದಿರುವ **6** ನೇ ಆರೋಪಿ ಸಾಬಣ್ಣ ಗೊತ್ತಿರುವುದಿಲ್ಲ**.** ಆತನು ನಮ್ಮನ್ನು ಎಲ್ಲಿಯೂ ಕರೆದುಕೊಂಡು ಹೋಗಿ ಯಾವುದೇ ವಸ್ತುವನ್ನು ಹಾಜರುಪಡಿಸಿಲ್ಲ**.** ಈಗ ಒಂದೂವರೆ ವರ್ಷದ ಕೆಳಗೆ ಒಂದು ದಿನ ಪೋಲೀಸರು ನನ್ನನ್ನು ಠಾಣೆಗೆ ಕರೆದುಕೊಂಡು ಹೋಗಿ ಬಿಳಿ ಹಾಳೆಯ ಮೇಲೆ ಸಹಿ ಪಡೆದುಕೊಂಡಿರುತ್ತಾರೆ**.** ಈಗ ನನ್ನ ಸಹಿ ಇರುವ ಆರೋಪಿ ನಂ**.6** ತೋರಿಸುವ ಜಾಗೆ ಮತ್ತು ಹಾಜರುಪಡಿಸುವ ಹಣ ಜಪ್ತಿ ಪಂಚನಾಮೆಯನ್ನು ನೋಡುತ್ತಿದ್ದು**,** ಅದನ್ನು ಈಗ ನಿ**.**ಪಿ**.16** ಎಂದು**,** ಸಾಕ್ಷಿಯ ಸಹಿಯನ್ನು ನಿ**.**ಪಿ**.16(**ಎ**)** ಎಂದು ಗುರುತಿಸಲಾಯಿತು**.** ಆ ಕಾಲಕ್ಕೆ ತೆಗೆದ ಎರಡು ಪೋಟೋಗಳನ್ನು ಕ್ರಮವಾಗಿ ನಿ**.**ಪಿ**.17** ಮತ್ತು

ನಿ.ಪಿ.**18** ಎಂದು ಗುರುತಿಸಲಾಯಿತು. ಸದರಿ ಫೋಟೋಗಳನ್ನು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ಹೇಳಲಿಕ್ಕೆ ಆಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪಂಚನಾಮೆಗೆ ವಿರುದ್ಧವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಪಿಪಿಯವರು ಅನುಮತಿ ಕೋರಿರುತ್ತಾರೆ. ವಾದ ಕೇಳಿ, ಹೇಳಿಕೆ ಪರಿಶೀಲಿಸಿ ಅನುಮತಿ ನೀಡಲಾಯಿತು).

**<u>ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ</u>**

**2)** ದಿನಾಂಕ **18.01.2024** ರಂದು ಪೋಲೀಸರು ನನ್ನನ್ನು ಮತ್ತು ಚಾ.ಸಾ.**9** ರವರನ್ನು ಕೊಲ್ಹಾರ ಪೋಲೀಸ ಠಾಣೆಗೆ ಕರೆಯಿಸಿ ಅಲ್ಲಿ ಅವರ ವಶದಲ್ಲಿದ್ದ **6** ನೇ ಆರೋಪಿಯು ತನ್ನ ಜೊತೆ ಬಂದರೆ, ತನಗೆ **5** ನೇ ಆರೋಪಿ ಹಣಮಂತನು ಶ್ರೀಗಂಧ ಕಟ್ಟಿಗೆ ಮಾರಿದ ಜಾಗೆ ತೋರಿಸಿ ಮತ್ತು ಹಣ ಹಾಜರುಪಡಿಸುತ್ತೇನೆ ಎಂದು ಹೇಳಿದ್ದರಿಂದ ಕಾರಜೋಳ ಗ್ರಾಮದ ಕಡೆಗೆ ಹೋಗಿ, ಮುತ್ತ್ಯಾನ ಗುಡಿ ಹತ್ತಿರ ಒಂದು ಕಚ್ಚಾ ರಸ್ತೆಯ ಗುಂಟ ಹೋಗಿ ಒಂದು ಜಮೀನಿನ ಪತ್ರಾಸ ಶೆಡ್ಡಿನ ಮುಂದೆ ನಿಂತು, ಇದೇ ಜಾಗೆಯಲ್ಲಿ **5** ನೇ ಆರೋಪಿಯು ತನಗೆ ಶ್ರೀಗಂಧದ ಕಟ್ಟಿಗೆ ಮಾರಿದ್ದಾನೆ ಎಂದು ಜಾಗೆ ತೋರಿಸಿ, ನಂತರ ಶೆಡ್ಡಿನ ಒಳಗಡೆ ಹೋಗಿ ತಲಾ ರೂ.**500/-** ಮುಖಬೆಲೆಯ ಒಟ್ಟು **146** ನೋಟುಗಳನ್ನು ಮತ್ತು ಒಂದು ಕಾರ್ಬನ್

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 08**
**ಪಿಡಬ್ಲೂಃ 07**

ಕಂಪನಿಯ ಮೊಬೈಲ ಹಾಜರುಪಡಿಸಿದ್ದು, ಅವುಗಳನ್ನು ಪೋಲೀಸರು ನಮ್ಮ ಸಮಕ್ಷಮ ಜಪ್ತಿ ಮಾಡಿಕೊಂಡು, ಅದರ ಬಗ್ಗೆ ಬೆಳಿಗ್ಗೆ **10.30** ರಿಂದ **12.00** ಘಂಟೆಯವರೆಗೆ ನಿ.ಪಿ.**16** ರಂತೆ ಪಂಚನಾಮೆ ಮಾಡಿ, ನಮ್ಮ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಿ.ಪಿ.**17** ಮತ್ತು **18** ರಂತೆ ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

**3)** ಪೋಲೀಸರು ನಮ್ಮ ಸಮಕ್ಷಮ ನಿ.ಪಿ.**16** ರಂತೆ ಪಂಚನಾಮೆ ಮಾಡಿ, ನಿ.ಪಿ.**17** ಮತ್ತು **18** ರಂತೆ ಪೋಟೋಗಳನ್ನು ತೆಗೆದಿದ್ದರೂ ಕೂಡ, ಈಗ ಆರೋಪಿತರಿಗೆ ಸಹಾಯ ಮಾಡಲು ಇಲ್ಲವೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿಃ**

ಏನೂ ಇರುವುದಿಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

4 ನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ವಿಜಯಪುರ.

## ನಾಲ್ಕನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ, ಇವರ ನ್ಯಾಯಾಲಯ

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 09**
**ಪಿಡಬ್ಲೂಃ 08**

ಸಾಕ್ಷಿದಾರರ ಹೆಸರು : ದಸ್ತಗಿರ ಬಾನಿ

ತಂದೆಯ ಹೆಸರು : ಹಾಸಿಮಪೀರ

ವಯಸ್ಸು : **44** ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಕಾಖಂಡಕಿ

- - - - -

**ಇಂದು ದಿನಾಂಕ 19.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

) ನನಗೆ ನ್ಯಾಯಾಲಯದ ಮುಂದಿರುವ **6** ನೇ ಆರೋಪಿ ಸಾಬಣ್ಣ ಗೊತ್ತಿರುವುದಿಲ್ಲ. ಆತನು ನಮ್ಮನ್ನು ಎಲ್ಲಿಯೂ ಕರೆದುಕೊಂಡು ಹೋಗಿ ಯಾವುದೇ ವಸ್ತುವನ್ನು ಹಾಜರುಪಡಿಸಿಲ್ಲ. ಈಗ ಒಂದೂವರೆ ವರ್ಷದ ಕೆಳಗೆ ಒಂದು ದಿನ ಪೋಲೀಸರು ನನ್ನನ್ನು ಠಾಣೆಗೆ ಕರೆದುಕೊಂಡು ಹೋಗಿ ಬಿಳಿ ಹಾಳೆಯ ಮೇಲೆ ನನ್ನ ಹೆಬ್ಬಟ್ಟಿನ ಗುರುತು ಪಡೆದುಕೊಂಡಿರುತ್ತಾರೆ. ಈಗ ನನ್ನ ಹೆಬ್ಬಟ್ಟಿನ ಗುರುತು ಇರುವ ಆರೋಪಿ ನಂ.**6** ತೋರಿಸುವ ಜಾಗೆ ಮತ್ತು ಹಾಜರುಪಡಿಸುವ ಹಣ ಜಪ್ತಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿ.ಪಿ.**16** ಎಂದು ಗುರುತಿಸಲಾಗಿದೆ. ಆ ಕಾಲಕ್ಕೆ ತೆಗೆದ ಎರಡು ಪೋಟೋಗಳನ್ನು

ಕ್ರಮವಾಗಿ ನಿ.ಪಿ.**17** ಮತ್ತು ನಿ.ಪಿ.**18** ಎಂದು ಗುರುತಿಸಲಾಗಿದೆ. ಸದರಿ ಪೋಟೋಗಳನ್ನು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ಹೇಳಲಿಕ್ಕೆ ಆಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪಂಚನಾಮೆಗೆ ವಿರುದ್ಧವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಪಿಪಿಯವರು ಅನುಮತಿ ಕೋರಿರುತ್ತಾರೆ. ವಾದ ಕೇಳಿ, ಹೇಳಿಕೆ ಪರಿಶೀಲಿಸಿ ಅನುಮತಿ ನೀಡಲಾಯಿತು).

**<u>ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ</u>**

**2)** ದಿನಾಂಕ **18.01.2024** ರಂದು ಪೋಲೀಸರು ನನ್ನನ್ನು ಮತ್ತು ಚಾ.ಸಾ.**8** ರವರನ್ನು ಕೊಲ್ಹಾರ ಪೋಲೀಸ ಠಾಣೆಗೆ ಕರೆಯಿಸಿ ಅಲ್ಲಿ ಅವರ ವಶದಲ್ಲಿದ್ದ **6** ನೇ ಆರೋಪಿಯು ತನ್ನ ಜೊತೆ ಬಂದರೆ, ತನಗೆ **5** ನೇ ಆರೋಪಿ ಹಣಮಂತನು ಶ್ರೀಗಂಧ ಕಟ್ಟಿಗೆ ಮಾರಿದ ಜಾಗೆ ತೋರಿಸಿ ಮತ್ತು ಹಣ ಹಾಜರುಪಡಿಸುತ್ತೇನೆ ಎಂದು ಹೇಳಿದ್ದರಿಂದ ಕಾರಜೋಳ ಗ್ರಾಮದ ಕಡೆಗೆ ಹೋಗಿ, ಮುತ್ಯಾನ ಗುಡಿ ಹತ್ತಿರ ಒಂದು ಕಚ್ಚಾ ರಸ್ತೆಯ ಗುಂಟ ಹೋಗಿ ಒಂದು ಜಮೀನಿನ ಪತ್ರಾಸ ಶೆಡ್ಡಿನ ಮುಂದೆ ನಿಂತು, ಇದೇ ಜಾಗೆಯಲ್ಲಿ **5** ನೇ ಆರೋಪಿಯು ತನಗೆ ಶ್ರೀಗಂಧದ ಕಟ್ಟಿಗೆ ಮಾರಿದ್ದಾನೆ ಎಂದು ಜಾಗೆ ತೋರಿಸಿ, ನಂತರ ಶೆಡ್ಡಿನ ಒಳಗಡೆ ಹೋಗಿ ತಲಾ ರೂ.**500/-**

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 09**
**ಪಿಡಬ್ಲೂಃ 08**

ಮುಖಬೆಲೆಯ ಒಟ್ಟು **146** ನೋಟುಗಳನ್ನು ಮತ್ತು ಒಂದು ಕಾರ್ಬನ್ ಕಂಪನಿಯ ಮೊಬೈಲ ಹಾಜರುಪಡಿಸಿದ್ದು**,** ಅವುಗಳನ್ನು ಪೋಲೀಸರು ನಮ್ಮ ಸಮಕ್ಷಮ ಜಪ್ತಿ ಮಾಡಿಕೊಂಡು**,** ಅದರ ಬಗ್ಗೆ ಬೆಳಿಗ್ಗೆ **10.30** ರಿಂದ **12.00** ಘಂಟೆಯವರೆಗೆ ನಿ.ಪಿ**.16** ರಂತೆ ಪಂಚನಾಮೆ ಮಾಡಿ**,** ನಮ್ಮ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ**.** ಆ ಕಾಲಕ್ಕೆ ನಿ.ಪಿ**.17** ಮತ್ತು **18** ರಂತೆ ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ**.**

**3)** ಪೋಲೀಸರು ನಮ್ಮ ಸಮಕ್ಷಮ ನಿ.ಪಿ**.16** ರಂತೆ ಪಂಚನಾಮೆ ಮಾಡಿ**,** ನಿ.ಪಿ**.17** ಮತ್ತು **18** ರಂತೆ ಪೋಟೋಗಳನ್ನು ತೆಗೆದಿದ್ದರೂ ಕೂಡ**,** ಈಗ ಆರೋಪಿತರಿಗೆ ಸಹಾಯ ಮಾಡಲು ಇಲ್ಲವೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ**.**

**ಪಾಟೀ ಸವಾಲುಃ ಆರೋಪಿತರ ಪರವಾಗಿಃ**

ಏನೂ ಇರುವುದಿಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

4 ನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ವಿಜಯಪುರ.

# **ನಾಲ್ಕನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ, ಇವರ ನ್ಯಾಯಾಲಯ**

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 10**
**ಪಿಡಬ್ಲೂಃ 09**

ಸಾಕ್ಷಿದಾರರ ಹೆಸರು **:** ಚೇತನ ಕಾಮನಕೇರಿ

ತಂದೆಯ ಹೆಸರು **:** ಬಸವರಾಜ

ವಯಸ್ಸು **: 25** ವರ್ಷ

ಉದ್ಯೋಗ **:** ಕೂಲಿ

ವಾಸಸ್ಥಳ **:** ಆಲಮಟ್ಟಿ

- - - - -

**ಇಂದು ದಿನಾಂಕ 19.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

1) ನನಗೆ **6** ನೇ ಆರೋಪಿ ಸಾಬಣ್ಣ ಗೊತ್ತಿಲ್ಲ**.** ಆತನು ನಮ್ಮನ್ನು ಎಲ್ಲಿಯೂ ಕರೆದುಕೊಂಡು ಹೋಗಿಲ್ಲ**.** ಈಗ ಅಂದಾಜು ಒಂದೂವರೆ ವರ್ಷದ ಕೆಳಗೆ ನಾನು ನನ್ನ ವೈಯಕ್ತಿಕ ಕೆಲಸದ ಮೇಲೆ ನಿಡಗುಂದಿ ಪೋಲೀಸ ಠಾಣೆಗೆ ಹೋದಾಗ ಪೋಲೀಸರು ಒಂದು ಖಾಲಿ ಹಾಳೆಯ ಮೇಲೆ ಸಹಿ ಪಡೆದುಕೊಂಡಿದ್ದಾರೆ**.** ಈಗ ನನ್ನ ಸಹಿ ಇರುವ **6** ನೇ ಆರೋಪಿ ತೋರಿಸುವ ಜಾಗೆಯ ಪಂಚನಾಮೆಯನ್ನು ನೋಡುತ್ತಿದ್ದು**,** ಅದನ್ನು ಈಗ ನಿ**.**ಪಿ**.19** ಎಂದು**,** ಸಾಕ್ಷಿಯ ಸಹಿಯನ್ನು ನಿ**.**ಪಿ**.19(**ಎ**)** ಎಂದು ಗುರುತಿಸಲಾಯಿತು**.** ಈಗ ನನ್ನ ಭಾವಚಿತ್ರವಿರುವ ಎರಡು ಪೋಟೋಗಳನ್ನು ನೋಡುತ್ತಿದ್ದು**,** ಅವುಗಳನ್ನು ಕ್ರಮವಾಗಿ ನಿ**.**ಪಿ**.20**

ಮತ್ತು ನಿ.ಪಿ.**21** ಎಂದು ಗುರುತಿಸಲಾಯಿತು. ನನಗೆ ನಿ.ಪಿ.**19** ರಲ್ಲಿ ಬರೆದ ವಿಷಯಗಳು ಗೊತ್ತಿರುವುದಿಲ್ಲ. ನಿ.ಪಿ.**20** ಮತ್ತು **21** ಫೋಟೋಗಳನ್ನು ಎಲ್ಲಿ ಮತ್ತು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ಹೇಳಲಿಕ್ಕೆ ಆಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪಂಚನಾಮೆಗೆ ವಿರುದ್ದವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಪಿಪಿಯವರು ಅನುಮತಿ ಕೋರಿರುತ್ತಾರೆ. ವಾದ ಕೇಳಿ, ಹೇಳಿಕೆ ಪರಿಶೀಲಿಸಿ ಅನುಮತಿ ನೀಡಲಾಯಿತು).

**<u>ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ</u>**

**2)** ದಿನಾಂಕ **31.01.2024** ರಂದು ಪೋಲಿಸರು ನನ್ನನ್ನು ಮತ್ತು ಚಾ.ಸಾ.**11** ಇವರನ್ನು ಠಾಣೆಗೆ ಕರೆಯಿಸಿ, ಅವರ ವಶದಲ್ಲಿದ್ದ **6** ನೇ ಆರೋಪಿಯು ನಮಗೆ ತಾನು **5** ನೇ ಆರೋಪಿಯಿಂದ ಖರೀದಿಸಿದ ಶ್ರೀಗಂಧದ ತುಂಡುಗಳನ್ನು ತೆಲಂಗಾಣ ರಾಜ್ಯದ ಒಂದು ಮಿಲ್ಲಿನಲ್ಲಿ ಮಾರಿದ್ದೇನೆ, ತನ್ನ ಜೊತೆ ಬಂದರೆ ತೋರಿಸುತ್ತೇನೆ ಎಂದು ಹೇಳಿದ್ದರಿಂದ, ಅವನ ಜೊತೆ ರಾತ್ರಿ ಖಾಸಗಿ ವಾಹನದಲ್ಲಿ ಹೋಗಿದ್ದು, ಮರುದಿವಸ ವಿಕಾರಾಬಾದಗೆ ಕರೆದುಕೊಂಡು ಹೋಗಿ ಅಲ್ಲಿ ಮೋಮಿನ ಪೇಠ ಪಟ್ಟಣಕ್ಕೆ ಕರೆದುಕೊಂಡು ಹೋಗಿ, ಒಂದು ರಸ್ತೆಯ ಬದಿಗೆ ಇರುವ ಯುಟಿಸಿ ಕಂಪನಿ

ತೋರಿಸಿ, ಇದೇ ಮಿಲ್ಲಿಗೆ ಶ್ರೀಗಂಧದ ಕಟ್ಟಿಗೆಗಳನ್ನು ಮಾರಿದ್ದೇನೆ ಎಂದು ಜಾಗೆ ತೋರಿಸಿದ್ದು, ಅದರ ಬಗ್ಗೆ ಪೋಲೀಸರು ನಮ್ಮ ಸಮಕ್ಷಮ ನಿ.ಪಿ.**19** ರಂತೆ ಪಂಚನಾಮೆ ಮಾಡಿ, ನಿ.ಪಿ.**20** ಮತ್ತು **21** ರಂತೆ ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

**3)** ಪೋಲೀಸರು ನಮ್ಮ ಸಮಕ್ಷಮ ನಿ.ಪಿ.**19** ರಂತೆ ಪಂಚನಾಮೆ ಮಾಡಿ, ನಿ.ಪಿ.**20** ಮತ್ತು **21** ರಂತೆ ಪೋಟೋಗಳನ್ನು ತೆಗೆದಿದ್ದರೂ ಕೂಡ, ಈಗ ಆರೋಪಿತರಿಗೆ ಸಹಾಯ ಮಾಡಲು ಇಲ್ಲವೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿಃ</u>**

ಏನೂ ಇರುವುದಿಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

4 ನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ವಿಜಯಪುರ.

**ನಾಲ್ಕನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ, ಇವರ ನ್ಯಾಯಾಲಯ**

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 11**
**ಪಿಡಬ್ಲೂಃ 10**

ಸಾಕ್ಷಿದಾರರ ಹೆಸರು : ಮಂಜುನಾಥ ಕಾರಜೋಳ

ತಂದೆಯ ಹೆಸರು : ಶಿವಲಿಂಗಪ್ಪ

ವಯಸ್ಸು : **35** ವರ್ಷ

ಉದ್ಯೋಗ : ಚಾಲಕ

ವಾಸಸ್ಥಳ : ವಿಜಯಪುರ.

- - - - -

**ಇಂದು ದಿನಾಂಕ 19.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

1) ನನಗೆ **6** ನೇ ಆರೋಪಿ ಸಾಬಣ್ಣ ಗೊತ್ತಿಲ್ಲ. ಆತನು ನಮ್ಮನ್ನು ಎಲ್ಲಿಯೂ ಕರೆದುಕೊಂಡು ಹೋಗಿಲ್ಲ. ಈಗ ಅಂದಾಜು ಒಂದೂವರೆ ವರ್ಷದ ಕೆಳಗೆ ನಾನು ನನ್ನ ವೈಯಕ್ತಿಕ ಕೆಲಸದ ಮೇಲೆ ನಿಡಗುಂದಿ ಪೋಲೀಸ ಠಾಣೆಗೆ ಹೋದಾಗ ಪೋಲೀಸರು ಒಂದು ಖಾಲಿ ಹಾಳೆಯ ಮೇಲೆ ಸಹಿ ಪಡೆದುಕೊಂಡಿದ್ದಾರೆ. ಈಗ ನನ್ನ ಸಹಿ ಇರುವ **6** ನೇ ಆರೋಪಿ ತೋರಿಸುವ ಜಾಗೆಯ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿ.ಪಿ.**19** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.**19(**ಬಿ**)** ಎಂದು ಗುರುತಿಸಲಾಯಿತು. ಈಗ ನನ್ನ ಭಾವಚಿತ್ರವಿರುವ ಎರಡು ಪೋಟೋಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 11**
**ಪಿಡಬ್ಲೂಃ 10**

ಕ್ರಮವಾಗಿ ನಿ.ಪಿ.**20** ಮತ್ತು ನಿ.ಪಿ.**21** ಎಂದು ಗುರುತಿಸಲಾಗಿದೆ. ನನಗೆ ನಿ.ಪಿ.**19** ರಲ್ಲಿ ಬರೆದ ವಿಷಯಗಳು ಗೊತ್ತಿರುವುದಿಲ್ಲ. ನಿ.ಪಿ.**20** ಮತ್ತು **21** ಪೋಟೋಗಳನ್ನು ಎಲ್ಲಿ ಮತ್ತು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ಹೇಳಲಿಕ್ಕೆ ಆಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪಂಚನಾಮೆಗೆ ವಿರುದ್ಧವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಪಿಪಿಯವರು ಅನುಮತಿ ಕೋರಿರುತ್ತಾರೆ. ವಾದ ಕೇಳಿ, ಹೇಳಿಕೆ ಪರಿಶೀಲಿಸಿ ಅನುಮತಿ ನೀಡಲಾಯಿತು).

**<u>ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ</u>**

**2)** ದಿನಾಂಕ **31.01.2024** ರಂದು ಪೋಲಿಸರು ನನ್ನನ್ನು ಮತ್ತು ಚಾ.ಸಾ.**10** ಇವರನ್ನು ಠಾಣೆಗೆ ಕರೆಯಿಸಿ, ಅವರ ವಶದಲ್ಲಿದ್ದ **6** ನೇ ಆರೋಪಿಯು ನಮಗೆ ತಾನು **5** ನೇ ಆರೋಪಿಯಿಂದ ಖರೀದಿಸಿದ ಶ್ರೀಗಂಧದ ತುಂಡುಗಳನ್ನು ತೆಲಂಗಾಣ ರಾಜ್ಯದ ಒಂದು ಮಿಲ್ಲಿನಲ್ಲಿ ಮಾರಿದ್ದೇನೆ, ತನ್ನ ಜೊತೆ ಬಂದರೆ ತೋರಿಸುತ್ತೇನೆ ಎಂದು ಹೇಳಿದ್ದರಿಂದ, ಅವನ ಜೊತೆ ರಾತ್ರಿ ಖಾಸಗಿ ವಾಹನದಲ್ಲಿ ಹೋಗಿದ್ದು, ಮರುದಿವಸ ವಿಕಾರಾಬಾದಗೆ ಕರೆದುಕೊಂಡು ಹೋಗಿ ಅಲ್ಲಿ ಮೋಮಿನ ಪೇಠ ಪಟ್ಟಣಕ್ಕೆ ಕರೆದುಕೊಂಡು ಹೋಗಿ, ಒಂದು ರಸ್ತೆಯ ಬದಿಗೆ ಇರುವ ಯುಟಿಸಿ ಕಂಪನಿ

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 11**
**ಪಿಡಬ್ಲೂಃ 10**

ತೋರಿಸಿ, ಇದೇ ಮಿಲ್ಲಿಗೆ ಶ್ರೀಗಂಧದ ಕಟ್ಟಿಗೆಗಳನ್ನು ಮಾರಿದ್ದೇನೆ ಎಂದು ಜಾಗೆ ತೋರಿಸಿದ್ದು, ಅದರ ಬಗ್ಗೆ ಪೋಲೀಸರು ನಮ್ಮ ಸಮಕ್ಷಮ ನಿ.ಪಿ.**19** ರಂತೆ ಪಂಚನಾಮೆ ಮಾಡಿ, ನಿ.ಪಿ.**20** ಮತ್ತು **21** ರಂತೆ ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

**3)** ಪೋಲೀಸರು ನಮ್ಮ ಸಮಕ್ಷಮ ನಿ.ಪಿ.**19** ರಂತೆ ಪಂಚನಾಮೆ ಮಾಡಿ, ನಿ.ಪಿ.**20** ಮತ್ತು **21** ರಂತೆ ಪೋಟೋಗಳನ್ನು ತೆಗೆದಿದ್ದರೂ ಕೂಡ, ಈಗ ಆರೋಪಿತರಿಗೆ ಸಹಾಯ ಮಾಡಲು ಇಲ್ಲವೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿಃ**

ಏನೂ ಇರುವುದಿಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

4 ನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ವಿಜಯಪುರ.